**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ 1 ನೇ ಎಂ.ಎ.ಸಿ.ಟಿ. ನ್ಯಾಯಾಲಯ, ಕಾರವಾರ**

**ಎಂ.ವಿ.ಸಿ. 263/24**

ಆರ್.ಡಬ್ಲ್ಯು 2

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರಕಾಶ ಪಟಗಾರ |
| ತಂದೆಯ ಹೆಸರು | - | ಶಿವಪ್ಪ ಪಟಗಾರ |
| ವಯಸ್ಸು | - | 46 ವರ್ಷ |
| ಉದ್ಯೋಗ | - | ಮುಖ್ಯ ಪೇದೆ, ಕಾರವಾರ ಸಂಚಾರಿ ಪೊಲೀಸ್ ಠಾಣೆ |
| ವಾಸ್ತವ್ಯ | - | ಕಾರವಾರ |

(ಇಂದು ದಿನಾಂಕ 19-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - 2 ನೇ ಎದುರುದಾರರ ಪರ ಶ್ರೀ ಎ.ಜಿ.ಹೆಚ್. ವಕೀಲರಿಂದಃ**

ನಾನು ಕಳೆದ 6 ವರ್ಷಗಳಿಂದ ಕಾರವಾರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ಠಾಣಾ ಗುನ್ನಾ ನಂ. 100/2022, ದಿನಾಂಕ 14-02-2022 ರಂದು ಸಂಜೆ 5.30 ಗಂಟೆಗೆ ನಮ್ಮ ಠಾಣೆಯಲ್ಲಿ ಕೇಸು ದಾಖಲಾಗಿದೆ. ಪ್ರಥಮ ವರ್ತಮಾನ ಹೇಳಿಕೆಯನ್ನು ರಾಜನ್ ತಂದೆ ಮಧುಸೂಧನ್ ದೂದಾಳಕರ್ ಕೊಟ್ಟಿದ್ದರು. ಆ ಸಮಯದಲ್ಲಿ ಗೊತ್ತಿಲ್ಲದ ವಾಹನದ ಮೇಲೆ ಕೇಸನ್ನು ದಾಖಲಿಸಿದ್ದೇವೆ. ಗಾಯಾಳು ನಾಗಮಂಗಲ ಆಸ್ಪತ್ರೆ, ಕಾರವಾರದಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದರು. ರಾಜನ್ ಇವರು ನನಗೆ ಬಂದು ಹೇಳಿದ್ದರ ಮೇರೆಗೆ ನಾನು ಆಸ್ಪತ್ರೆಗೆ ಹೋಗಿ ಹೇಳಿಕೆ ಪಡೆದುಕೊಂಡಿದ್ದೇನೆ. ಗಾಯಾಳು ವಾಹನದ ಸಂಖ್ಯೆಯನ್ನು ಹೇಳಿಲ್ಲ. ನಾನು ಸ್ಥಳ ಪಂಚನಾಮೆ ಮಾಡಿ ಗಾಯಾಳುವಿನ ವಾಹನವನ್ನು ಅಮಾನತ್ತುಪಡಿಸಿಕೊಂಡಿದ್ದೇನೆ ಮತ್ತು ಯಾಂತ್ರಿಕ ಪರೀಕ್ಷೆಗಾಗಿ ಆರ್.ಟಿ.ಓ. ಇವರಿಗೆ ಮನವಿ ಮಾಡಿಕೊಂಡಿದ್ದೇನೆ. ನಂತರ ಪಿ.ಎಸ್.ಐ. ಇವರ ಆದೇಶದ ಮೇರೆಗೆ ತನಿಖೆಯನ್ನು ಮುಂದುವರಿಸಿ ದಿನಾಂಕ 18-02-2022 ರಂದು ನನಗೆ ವಾಹನವನ್ನು ಹುಡುಕಲು ಮೆಮೊ ಕೊಟ್ಟಿದ್ದು ನಾನು ವಾಹನವನ್ನು ಹುಡುಕಿದರೂ ಸಿಕ್ಕಿರಲಿಲ್ಲ. ನಂತರ ದಿನಾಂಕ 03-04-2022 ರಂದು ಪುನಃ ವಾಹನವನ್ನು ಹುಡುಕಲು ಮೊಮೋವನ್ನು ನೀಡಿದ್ದರ ಮೇರೆಗೆ ನಾನು ಕಾರವಾರದ ಬೇರೆ ಬೇರೆ ಸ್ಥಳಗಳಲ್ಲಿ ಪರಿಶೀಲನೆ ಮಾಡಿ ಬಾತ್ಮಿದಾರರ ಖಚಿತ ಮಾಹಿತಿಯ ಮೇರೆಗೆ ಕೆಂಚಾ ರಸ್ತೆಯಲ್ಲಿ ಸುದನ್ ಬಾಂದೇಕರ್ ಇವರ ಕಾರ್ ಎಂದು ತಿಳಿದು ಬಂದಿದ್ದು, ಅದರಂತೆ ಸುದನ್ ಬಾಂದೇಕರ್ ಇವರ ಮನೆಗೆ ಹೋಗಿ ವಿಚಾರವನ್ನು ತಿಳಿಸಿ ಠಾಣೆಗೆ ವಿಚಾರಣೆಗಾಗಿ ಬರಲು ಹೇಳಿ ಬಂದಿರುತ್ತೇನೆ. ಬಾತ್ಮಿದಾರರ ಹೇಳಿಕೆಯ ಮೇರೆಗೆ ಇಂತಹ ವಾಹನದಿಂದ ಅಪಘಾತವಾಗಿದೆ ಎಂದು ತಿಳಿದು ಬಂದಿದೆ.

**(ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾಗೂ 1 ನೇ ಎಂ.ಎ.ಸಿ.ಟಿ. ಕಾರವಾರ